ಆಗಿನ್ನೂ ಆರೇಳು ವರ್ಷದ ಹುಡುಗನಾಗಿದ್ದ ನನ್ನ ಕೈಗೆ ಬೆಳ್ಳಂಬೆಳಿಗ್ಗೆ ಹತ್ತು ಪೈಸೆಯ ಚೂರು ಕೈಗೆ ಹಾಕಿ ಚಹಾ ಪುಡಿ ತರಲು ಶೆಟ್ಟರ ಕಿರಾಣಿ ಅಂಗಡಿಗೆ ಅಟ್ಟುತ್ತಿದ್ದರು. ಅದೇ ಆಗ ಬಾಗಿಲು ತೆರೆದು ಹುಡುಗನೊಬ್ಬ ಕಸ ಗುಡಿಸುತ್ತಿದ್ದ ವೇಳೆ ಶೆಟ್ಟಿಯೆ ಸ್ವತಃ ಎದ್ದು ವಾಡಿಕೆಗಿಂತ ತುಸು ಹೆಚ್ಚೇ ಚಾ ಪುಡಿಯ ಚೀಟು ಕಟ್ಟಿ ಕೊಟ್ಟಾಗ, ಕುಣಿದಾಡಿಕೊಂಡು ಬಂದಿದ್ದೆ. ವಾಸ್ತವವಾಗಿ, ಶೆಟ್ಟಿಯು ಯಾಮಾರಿ-ಮೋಸ ಹೋಗಿದ್ದಲ್ಲವೆಂದೂ, ಕುರುಬರ ಮೊದಲ ಬೋಣಿಯಿಂದ ಆತನಿಗೆ ಹುಲುಸಾಗುತ್ತದೆಂಬ ನಂಬಿಕೆಯಿರುವುದೆಂದೂ ಮನೆಯ ಮಂದಿ ಸಮಜಾಯಿಷಿ ನೀಡಿದಾಗ 'ಹೀಗೂ ಉಂಟೇ' ಎಂದು ಹುಬ್ಬೇರಿಸಿದ್ದೆ. ‘ಹಾಲು ಕೆಟ್ಟರೂ ಕೆಟ್ಟೀತು ಅದರೆ ಹಾಲುಮತದವ ಕೆಡಲಾರ’ ಎಂಬ ನುಡಿಗಟ್ಟು ಹುಟ್ಟಿದ್ದು ಬಹುಶಃ ಕಾಡಾಡಿಯಾಗಿದ್ದ ಆತನ ಮುಗ್ಧತೆಯಿಂದಲೆ ಇರಬೇಕು. ಊರಿನ ಉಸಾಬರಿಯಲ್ಲಿನ ಆ ಮೋಸ -ತಟವಟಗಳೊಂದೂ ಆತನಿಗೆ ಪರಿಚಯವಿಲ್ಲದ ಅಮಾಯಕನಾಗಿದ್ದ ಕಾರಣಕ್ಕೆ!

ಬಸವ ಜಯಂತಿಯಂದು ಊರ ಜಾತ್ರೆ. ಎರಡು ವರ್ಷದ ಮಗುವಾಗಿದ್ದ ನನ್ನನ್ನು ಒಮ್ಮೆ ಎತ್ತಿಕೊಂಡು ಸೀದಾ ಸಾರಾಯಿ ಅಂಗಡಿಗೆ ಹೋಗಿದ್ದ ಅಪ್ಪ, ಹಾಗೇ ಬಜಾರಿನಲ್ಲಿ ನಿಂತಿದ್ದ ಕಡೇ ಬಸ್ಸಿನ ಬಾಜೂ ಗೆಳೆಯನೊಂದಿಗೆ ಅದೂ ಇದೂ ಮಾತನಾಡುತ್ತಾ ನಿಂತಾಗ ಬಸ್ಸಿನಲ್ಲಿ ಕಿಡಕಿ ಕಡೆಗಿದ್ದ ಹೆಣ್ಣುಮಗಳೊಬ್ಬಾಕೆ ಸುಮ್ಮನಿರದೆ ‘ಹೇಯ್ ಕಳ್ಳ , ಹಾಯ್ ಕಳ್ಳ, ಹಾಂ ಛೀ ಕಳ್ಳ’ ಎಂದು ಕಿಚಾಯಿಸಿ, ಮಗುವಿನತ್ತ ಕೈಚಾಚಿದ್ದಳು. ಕಿಟಕಿಯಿಂದಲೆ ಆಕೆಗೆ ಮಗುವನ್ನು ಒಪ್ಪಿಸಿದ್ದ ಅಪ್ಪ, ಮತ್ತೊಂದು ರೌಂಡು ಸಾರಾಯಿ ಹೀರಲು ಗೆಳೆಯನೊಂದಿಗೆ ಕೈ ಬೀಸಿಕೊಂಡು ನಡೆದಿದ್ದ, ದಿವಿನಾಗಿ!

ತಡರಾತ್ರಿ, ನಿಶೆಯಲ್ಲಿ ತಾರಾಡಿಕೊಂಡು ಬರಿಗೈಯಲ್ಲಿ ಮನೆಗೆ ಬಂದ ಅಪ್ಪನನ್ನು ಕಂಡು ಹೌಹಾರಿದ ಅವ್ವ ‘ಕೂಸು ಎಲ್ಲಿ?’ ಎಂದು ಬೋರಾಡಿಕೊಂಡು ಅಳಲಾರಂಭಿಸಿದಾಗ, ಊರ ಜನರೆಲ್ಲ ಸೇರಿದ್ದರು. ಅಪ್ಪನ ಮೈಮೇಲೆ ಪ್ರಜ್ಞೆಯಿದ್ದರೆ ತಾನೆ? ಎಲ್ಲದಕ್ಕೂ ‘ಗೊತ್ತಿಲ್ಲಾ’ ಎಂದು ಕೈಯಾಡಿಸುತ್ತಿದ್ದನಂತೆ.

ಮನೆ ದೇವರು ರೇವಣಕಿ ಈರಣ್ಣ ಅಂದರೆ ‘ವೀರ ಹನುಮ’ನಿಗೆ ಹರಕೆ ಹೊತ್ತು ಬಹಳ ದಿನಗಳ ನಂತರ ಹಡೆದಿದ್ದ ಮಗು. ದೊಡ್ಡಪ್ಪ ಬಾರುಕೋಲು ಎತ್ತಿಕೊಂಡು ಬಂದ, ಅಪ್ಪನಿಗೆ ನಾಕು ಬಾರಿಸಲು. ನಮ್ಮ ಮನೆಯ ದೇವತೆ ಹನುಮತ್ತೆ ಅಂದರೆ ಆತನ ಖಾಸಾ ಅಕ್ಕ ಆತನ ಕೈ ತಡೆದಿದ್ದಳು.

ಆಗಿನ್ನೂ ಕರೆಂಟ್ ಇಲ್ಲದ ಕಾಲವೆಂದು ಆಗಲೇ ಹೇಳಿದೆನಲ್ಲ. ಊರಿಗೆ ಊರೇ ಮಲಗಿದ್ದ ಹೊತ್ತು. ಆ ಕಾಳ ರಾತ್ರಿಯಲ್ಲಿ ದಿಕ್ಕಿಗೊಬ್ಬೊಬ್ಬರು ಹುಡುಕಿಕೊಂಡು ಹೊರಟರು. ಸಂಕನೂರು ಅಡ್ಡ ಲೈನ್ ಕ್ರಾಸ್ ಗೆ ಹೋಗುವ ಕಡೇ ಬಸ್ಸಿನಲ್ಲಿ ಕೂತಿದ್ದ ಗಂಡ - ಹೆಂಡತಿ ಜೋಡಿ, ಬಸ್ಸು ಹೊರಟಾಗ ‘ಈ ಕೂಸು ಯಾರದು?’ ಎಂದು ಕೇಳುತ್ತಿದ್ದರೆಂದೂ ಮುಧೋಳದವರಾದ ಅವರೇ ಬಹುಶಃ ಎತ್ತಿಕೊಂಡು ಹೋಗಿರಬೇಕೆಂದೂ ರಸ್ತೆ ಬದಿಯಲ್ಲಿ ಮಲಗಿದ್ದ ಬಸ್ಸಿನ ಕಿಲೀನರ್ ಹೇಳಿದ ಸುಳುಹಿನ ಮೇಲೆ, ಅವ್ವನನ್ನೂ ಜೊತೆಗೆ ಹಾಕಿಕೊಂಡು ಉರಿಯುವ ದೊಂದಿಯ ಬೆಳಕಿನಲ್ಲಿ ನಾಕು ಮಂದಿ ಏಳು ಕಿಲೋಮೀಟರ್ ದೂರದ ಆ ಹಳ್ಳಿಗೆ ನಡೆದುಕೊಂಡು ಹೋಗಿ ಕೇಳಿದರೆ, ಆಗಲೇ ಮಗುವನ್ನು ತಂದಿದ್ದು ಅಲ್ಲಿಯೂ ಸುದ್ದಿಯಾಗಿತ್ತು.

ಹಾಗೆ ಮಗುವನ್ನು ಎತ್ತಿಕೊಂಡು ತಂದ ದಂಪತಿಗೆ ಛೀಮಾರಿ ಹಾಕಿದ್ದ ಊರಿನ ಜನ, ಅವರ ಪೈಕಿ ಒಬ್ಬಾತ ಅಳುವ ಕಂದನನ್ನು ಇಸ್ಪೀಟು ಆಡುವ ಮ್ಯಾಳದ ಮನೆಗೆಲ್ಲ ಎತ್ತಿಕೊಂಡು ಹೋಗಿ, ಮಗುವನ್ನು ರಮಿಸಿ, ಅದರ ಹೊಟ್ಟೆಗೆ ಹಾಕಿ, ಇದೀಗ ಮಲಗಿಸಿರುವುದಾಗಿ ಹೇಳಿ ಯಾವುದಕ್ಕೂ ಚಿಂತೆ ಮಾಡಬೇಡಿರೆಂದು ಸಮಾಧಾನ ಮಾಡಿದರು. ಮಧ್ಯರಾತ್ರಿಯ ಆ ಅವೇಳೆಯಲ್ಲಿ ಅಡುಗೆ ಮಾಡಿಸಿ ಊಟ ಹಾಕಿ ಅಲ್ಲೇ ಉಳಿಸಿಕೊಂಡು ಮರುದಿನ ಕಳಿಸಿ ಕೊಟ್ಟರಂತೆ. ಹೇಳೀಕೇಳೀ ಜಾತ್ರೆಯಲ್ಲಿ ಕಳೆದು ಹೋಗಿದ್ದವನು ನಾನು! ಅದೇ ರೀತಿ, ತೇರಿಗೆ ಉತ್ತುತ್ತಿ ಒಗೆದವನಲ್ಲ ನಾನು. ಎಳೆಯುವ ತೇರಿನ ಹಿಂದೆ ಹಿಂಬಾಲಿಸುತ್ತ ಭಕ್ತರು ಎಸೆಯುತ್ತಿದ್ದ ಉತ್ತುತ್ತಿಗಳನ್ನು ಕೆಳಗೆ ಬೀಳದಂತೆ ಕ್ಯಾಚ್ ಹಿಡಿಯುತ್ತಿದ್ದ ಹುಡುಗರು. ನೆಲಕ್ಕೆ ಬಿದ್ದ ಉತ್ತುತ್ತೆ ತಿಂದರೇನು ಅದು ಟಾನಿಕ್ ಆಗದೆ ಇರುತ್ತದೆಯೇ!

ಅದೇ ಎಪ್ಪತ್ತೂರರಲ್ಲಿ ಒಮ್ಮೆ

